ಇ) ಈ ವರ್ಷದಲ್ಲಿ ಅದಕ್ಕಾಗಿ ಒದಗಿಸಿದ ಹಣ ಎಷ್ಟು ಹಾಗೂ ಈ ವರ್ಷದಲ್ಲಿ ಎಷ್ಟು ಮನೆಗಳನ್ನು ಕಟ್ಟಲಾಗುವುದು?

ಈ) ಈಗ ಕಟ್ಟಿರುವ ಮನೆಗಳಿಷ್ಟು ಹಾಗೂ ಆದ್ಯತೆಯ ಮೇಲೆ ಮನೆಗಳನ್ನು ಕಟ್ಟಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) 1,000 ಮನೆಗಳು

ಆ) ಶ್ರೀ ಮೊಹಮ್ಮದ್ ಸೇಠ್, ಗುತ್ತಿಗೆದಾರರು, ಬಳ್ಳಾರಿ.

ಇ) ಸದರಿ ಗುತ್ತಿಗೆದಾರರಿಗೆ ಕರ್ನಾಟಕ ಗೃಹ ಮಂಡಳಿಯಿಂದ ಒಟ್ಟು ರೂ. 60.10 ಲಕ್ಷಗಳನ್ನು ಮುಂಗಡವಾಗಿ ಕೊಡಲಾಗಿದೆ. ಮಾರ್ಚ್ 93ರ ಅಂತ್ಯದೊಳಗೆ ಹುಕ್ಕೇರಿ ಕ್ಷೇತ್ರದಲ್ಲಿ 150 ಮನೆಗಳನ್ನು ಕಟ್ಟುವ ನಿರೀಕ್ಷೆ ಇದೆ.

ಈ) ಯಾವುದೇ ಮನೆ ಸಂಪೂರ್ಣವಾಗಿಲ್ಲ. ತ್ವರಿತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ ಆಶ್ರಯ ಯೋಜನೆ

973 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಲು ಗುತ್ತಿಗೆದಾರರಿಗೆ ಎಷ್ಟು ಕ್ಷೇತ್ರಗಳಲ್ಲಿ ಗುತ್ತಿಗೆ ನೀಡಲಾಗಿದೆ?

ಆ) ಆಯಾ ಕ್ಷೇತ್ರದಲ್ಲಿ ಸದರಿ ಗುತ್ತಿಗೆದಾರರಿಗೆ ಒದಗಿಸಿದ ಹಣವೆಷ್ಟು?

ಇ) ಎಲ್ಲಾ ಕ್ಷೇತ್ರಗಳಲ್ಲಿ ಒಬ್ಬನೇ ಗುತ್ತಿಗೆದಾರನು ಕೆಲಸ ನಿರ್ವಹಿಸುವ ಸಾಧ್ಯತೆ ಇದೆಯೇ?

ಈ) ಇಂಥ ಕ್ರಮ ಬದಲಾಯಿಸಿ ಬೇರೆ ಬೇರೆ ಕ್ಷೇತ್ರಕ್ಕೆ ಬೇರೆ ಬೇರೆ ಗುತ್ತಿಗೆ ದಾರರನ್ನು ನೇಮಿಸಲು ಸಾಧ್ಯವಿಲ್ಲವೆ?

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು) :

ಅ) ಹುಕ್ಕೇರಿ ಕ್ಷೇತ್ರವೂ ಸೇರಿದಂತೆ ಬೆಳಗಾವಿ ಜಿಲ್ಲೆಯ 18 ವಿಧಾನ ಸಭಾ ಕ್ಷೇತ್ರಕ್ಕೂ ಇಬ್ಬರು ಗುತ್ತಿಗೆದಾರರಿಗೆ ಕಾಮಗಾರಿ ನೀಡಲಾಗಿದೆ.

ಆ) 1) ಶ್ರೀ ಮೊಹಮ್ಮದ್ ಸೇಠ್, ಬಳ್ಳಾರಿ

2) ಅಕ್ಷಯ ಕನಸ್ಟ್ರಕ್ಷನ್ಸ್, ಬೆಳಗಾವಿ 9 ಕ್ಷೇತ್ರ

ಇ) 1) ರೂ. 66.40 ಲಕ್ಷಗಳು

2) ರೂ. 17.23 ಲಕ್ಷಗಳು

ಇ) ಇಲ್ಲ

ಈ) ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 500 ಮನೆಗಳನ್ನು ನಿರ್ಮಿಸಲು ಸರ್ಕಾರವು ತೀರ್ಮಾನಿಸಿದ್ದು, ಯಾವ ಕ್ಷೇತ್ರದಲ್ಲಿ ಕರ್ನಾಟಕ ಗೃಹ ಮಂಡಳಿಯು

500 ಮನೆಗಳನ್ನು ನಿರ್ಮಿಸುವುದಿಲ್ಲವೋ ಆ ಕ್ಷೇತ್ರದಲ್ಲಿ ಉಳಿದ ಮನೆಗಳನ್ನು ಜಿಲ್ಲಾಧಿಕಾರಿಯವರಿಂದ ನಿರ್ಮಿಸಲು ನಿರ್ಧರಿಸಿದೆ.

ಹೊನ್ನಾವರ ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕ್ರಮ ಜಾರಿ.

1004-ಶ್ರೀ ಆರ್.ಎನ್. ನಾಯ್ಕ (ಭಟ್ಕಳ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ಅಂಗನವಾಡಿ ಕಾರ್ಯಕ್ರಮ ಜಾರಿಯಲ್ಲಿರುವುದು?

2) ಉತ್ತರ ಕನ್ನಡ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಅಂಗನವಾಡಿ ಕಾರ್ಯಕ್ರಮ ಜಾರಿಯಲ್ಲಿದೆ?

3) ಹೊನ್ನಾವರ ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕ್ರಮ ಜಾರಿಗೊಳಿಸಲು ಸರ್ಕಾರದವರಿಗೆ ಇರುವ ತೊಂದರೆಗಳೇನು

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದ 133ತಾಲ್ಲೂಕುಗಳಲ್ಲಿ ಐಸಿಡಿಎಸ್ ಕಾರ್ಯಕ್ರಮ ಜಾರಿಯಲ್ಲಿರುವುದು.

ಆ) ಸೂಫ, ಯಲ್ಲಾಪುರ, ಕಾರವಾರ, ಅಂಕೋಲ, ಕುಮಟಾ ಹಾಗೂ ಭಟ್ಕಳ ತಾಲ್ಲೂಕುಗಳಲ್ಲಿ ಐಸಿಡಿಎಸ್ ಕಾರ್ಯಕ್ರಮ ಜಾರಿಯಲ್ಲಿದೆ.

ಇ) ಈ ಯೋಜನೆಯನ್ನು ಕೇಂದ್ರ ಸರ್ಕಾರದವರೇ ಮಂಜೂರು ಮಾಡುತ್ತಾರೆ. ಕೇಂದ್ರ ಸರ್ಕಾರದಿಂದ ಹೊನ್ನಾವರ ಐಸಿಡಿಎಸ್ ಯೋಜನೆ ಇದುವರೆಗೂ ಮಂಜೂರಾಗಿಲ್ಲವೆಂದು ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿಲ್ಲ.

ಹೊನ್ನಾವರ ತಾಲ್ಲೂಕೂ ಸೇರಿದಂತೆ ಇನ್ನೂ ಮಂಜೂರಾಗದೆ ಇರುವ ರಾಜ್ಯದ ಎಲ್ಲಾ ತಾಲ್ಲೂಕುಗಳ ಮಾಹಿತಿಯನ್ನು ಕೇಂದ್ರ ಸರಕಾರದ ಪರಿಶೀಲನೆಗಾಗಿ ದಿನಾಂಕ 17-7-90ರಂದು ಕಳುಹಿಸಲಾಗಿದೆ. ಕೇಂದ್ರ ಸರಕಾರದ ಮಂಜೂರಾತಿ ದೊರೆತ ಮೇಲೆ ಇಲ್ಲೂ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ.

ಆಶ್ರಮ ಯೋಜನೆಯಲ್ಲಿ ನಿರ್ಮಿಸಲಾದ ಮನೆಗಳ ಸಂಖ್ಯೆ.

1033-ಶ್ರೀ ಮನೋಹರ ಐನಾಪುರ, (ಬೆಳ್ಳೋಳ್ಳಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಮ ಯೋಜನೆಯಡಿ ರಾಜ್ಯದಲ್ಲಿ ಇದುವರೆವಿಗೂ ನಿರ್ಮಿಸಲಾದ ಮನೆಗಳ ಸಂಖ್ಯೆ ಎಷ್ಟು?

ಆ) 1994.95ರೊಳಗೆ ಈ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು)

ಅ) 1044 ಮನೆಗಳು.

ಆ) ಸರ್ಕಾರದ ಆದೇಶ ಸಂಖ್ಯೆ ಹೆಚ್‌ಯುಡಿ 352 ಕೆಹೆಚ್‌ಬಿ 92 ದಿನಾಂಕ 15:12:92 ರ ಪ್ರಕಾರ ಕರ್ನಾಟಕ ಗೃಹ ಮಂಡಳಿ ಗುತ್ತಿಗೆದಾರರಿಗೆ ಮುಂಗಡವಾಗಿ ನೀಡಿರುವ ಮೊತ್ತಕ್ಕೆ ಸೀಮಿತವಾಗಿ ಆಶ್ರಯ ಮನೆಗಳನ್ನು ಪೂರ್ತಿ ಮಾಡುವಂತೆಯೂ